■ ವಿಶಾಖ ಎನ್.



# ಮುರುಗದಾಸ್ ನಿರ್ದೇಶನದಲ್ಲಿ ಸಲ್ಮಾನ್

'ಗಜಿನಿ' – ಜನಪ್ರಿಯ ಸಿನಿಮಾಗಳ ಸಾಲಿನಲ್ಲಿ ಮರೆಯಲಾಗದ ಹೆಸರು. ಬದುಕಿನ ಸಾರಸತ್ವವನ್ನೆಲ್ಲ ಬಸಿದು ತಂದವರಂತೆ ಎ.ಆರ್. ಮುರುಗದಾಸ್ ಆ ಚಿತ್ರವನ್ನು ಮೊದಲು ತಮಿಳಿನಲ್ಲಿ ನಿರ್ದೇಶಿಸಿದ್ದರು. ಅಜಿತ್ ಕೈ ಕೊಟ್ಟಿದ್ದ ಪ್ರಾಜೆಕ್ಟ್ ಅನ್ನು ಸೂರ್ಯ ಕಣ್ಣಿಗೊತ್ತಿಕೊಂಡು, ನಿರ್ಮಾಪಕರನ್ನೂ ಹುಡುಕಿ ಕೊಟ್ಟಿದ್ದರಿಂದ ಆದ ಚಿತ್ರವದು. ಆಮೇಲೆ ಅದು ದೊಡ್ಡ ಮಟ್ಟದ ಯಶಸ್ಸು ಕಂಡು, ಹಿಂದಿಯಲ್ಲೂ ರೀಮೇಕ್ ಆಯಿತು. ಅಮೀರ್ ಖಾನ್ ಅದರಲ್ಲಿ ಮೂಲಚಿತ್ರದ ನಾಯಕನ ಅಭಿನಯವನ್ನು ಅನುಕರಿಸದೆ ತಮ್ಮತನದ ಛಾಪು ಮೂಡಿಸಿದರು. ಇನ್ನೂ ಹೆಚ್ಚಿನ ಬಜೆಟ್‌ನಲ್ಲಿ ತಯಾರಾಗಿದ್ದ ಆ ಸಿನಿಮಾ ಕೂಡ ದೊಡ್ಡ ಯಶಸ್ಸನ್ನು ಕಂಡಿತ್ತು. ಈಗ ಮುರುಗದಾಸ್ ಅವರನ್ನು ಹಿಂದಿ ಚಿತ್ರರಂಗದ ದೊಡ್ಡ ನಿರ್ಮಾಣ ಸಂಸ್ಥೆ ಬಾಲಿವುಡ್‌ಗೆ ಮತ್ತೆ ಕರೆ ತರುತ್ತಿದೆ. ಸಲ್ಮಾನ್ ಖಾನ್ ಅವರನ್ನು ನಾಯಕರನ್ನಾಗಿಸಿ ಸಾಹಸಪ್ರಧಾನ ಸಿನಿಮಾ ಮಾಡುವ ಉಮೇದಿಗೆ ರೆಕ್ಕೆಪುಕ್ಕ ಮೂಡಿದೆ.

ನಿರ್ಮಾಪಕ ಸಾಜಿದ್ ನಾಡಿಯಾದ್‌ವಾಲಾ ಹಾಗೂ ಮುರುಗದಾಸ್ ಈಗಾಗಲೇ ಹೊಸ ಸಿನಿಮಾದ ಸಾರದ ಕುರಿತು ಚರ್ಚೆ ನಡೆಸಿದ್ದಾರೆ. ಸಲ್ಮಾನ್ ಖಾನ್ ಈ ಸಿನಿಮಾದ ನಾಯಕರಾಗುವುದು ಕೂಡ ಬಹುತೇಕ ನಿರ್ಧಾರಿತವಾಗಿದೆ. ಔಪಚಾರಿಕವಾಗಿ ಏನೆಲ್ಲ ಆಗಬೇಕೋ ಆ ಪ್ರಕ್ರಿಯೆಗಳಷ್ಟೆ ಬಾಕಿ ಇರುವುದು.



ಎ.ಆರ್.ಮುರುಗದಾಸ್

'ಕಿಕ್' ಹಿಂದಿ ಸಿನಿಮಾ ತೆರೆಕಂಡು ದಶಕವೇ ಉರುಳಿದೆ. ಆಗ ಸಾಜಿದ್ ಹಾಗೂ ಸಲ್ಮಾನ್ ಇಬ್ಬರ ಕಾಂಬಿನೇಷನ್‌ನಲ್ಲಿ ಆ ಸಿನಿಮಾ ಮೂಡಿಬಂದಿತ್ತು. ಅದಾದ ನಂತರ ಸಲ್ಮಾನ್ ಕಾಲ್‌ಷೀಟ್ ಅನ್ನು ಈ ನಿರ್ಮಾಪಕರು ಕೇಳಿಯೇ ಇರಲಿಲ್ಲ. ಕಳೆದ ಎರಡು ಮೂರು ವರ್ಷಗಳಿಂದ ಸಲ್ಮಾನ್ ಮಾರುಕಟ್ಟೆ ಕೂಡ ಮೊದಲಿನ ಲಯವನ್ನು ಕಳೆದುಕೊಂಡಿದೆ. 'ಟೈಗರ್ 3' ಹಿಂದಿ ಸಿನಿಮಾ ಬಾಕ್ಸಾಫೀಸ್‌ನಲ್ಲಿ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ದಕ್ಷಿಣ ಭಾರತದ ಮಿದುಳುಗಳಲ್ಲಿ ಪ್ರೇಕ್ಷಕರನ್ನು ಹಿಡಿದಿಡಬಲ್ಲ ಚಾಕಚಕ್ಯತೆ ಇದೆ ಎಂದು ನಂಬಿದವರಲ್ಲಿ ಸಾಜಿದ್ ನಾಡಿಯಾದ್‌ವಾಲಾ ಅವರೂ ಒಬ್ಬರು. ಹೀಗಾಗಿ ಅವರು ಮುರುಗದಾಸ್ ಅವರನ್ನು ಕರೆತಂದಿದ್ದಾರೆ.

ಎಲ್ಲವೂ ಅಂದುಕೊಂಡಂತೆ ಆದರೆ ಈ ಬೇಸಿಗೆಯಿಂದಲೇ ಹೊಸ ಸಿನಿಮಾದ ಚಿತ್ರೀಕರಣ ಪ್ರಾರಂಭವಾಗಲಿದೆ. ಮುಂದಿನ ವರ್ಷದ ಈದ್ ಹೊತ್ತಿಗೆ ಅದು ತೆರೆಕಾಣುವ ಸಾಧ್ಯತೆ ಇದೆ. ಚಿತ್ರದ ತಾರಾಗಣ, ತಾಂತ್ರಿಕ ವರ್ಗದ ಆಯ್ಕೆ ಪ್ರಕ್ರಿಯೆ ಈಗ ನಡೆಯುತ್ತಿದೆ. ■

## 'ಈಗಲ್' ಜೋರು ಹಾರಾಟ

ದೊಡ್ಡ ಸಿನಿಮಾಗಳು ಮಕಾಡೆಯಾಗುತ್ತಿದ್ದರೆ, ವರ್ಚಸ್ಸು ಮಂಕಾಗಿರುವ ಕೆಲವರ ಚಿತ್ರಗಳು ಮೇಲೇಳುತ್ತಿವೆ. ಒಂದೇ ಸಮನೆ ಸಿನಿಮಾ ಮಾಡುತ್ತಲೇ ಇರುವ ನಟ ರವಿ ತೇಜಾ ಅವರ 'ಈಗಲ್' ತೆಲುಗು ಸಿನಿಮಾ ತೆರೆಕಂಡ ವಾರದಲ್ಲೇ ಸದ್ದು ಮಾಡಿದೆ. ಮೂವತ್ತು ಕೋಟಿ ರೂಪಾಯಿಗೂ ಹೆಚ್ಚು ವಹಿವಾಟನ್ನು ನಡೆಸಿರುವ ಈ ಚಿತ್ರದಲ್ಲಿ ಹದವರಿತ ಮಸಾಲೆ ಇದೆ ಎಂದೇ ಸಿನಿಮಾ ವಿಶ್ಲೇಷಕರು ಬಿಡಿಸಿ ನೋಡತೊಡಗಿದ್ದಾರೆ.

ರವಿ ತೇಜಾ ಅಲ್ಲದೆ ಕಾವ್ಯಾ ಥಾಪರ್, ನವದೀಪ್ ಹಾಗೂ ಅನುಪಮಾ ಪರಮೇಶ್ವರನ್ ಅಭಿನಯಿಸಿರುವ 'ಈಗಲ್' ಚಿತ್ರವನ್ನು ಕಾರ್ತಿಕ್ ಗುಟ್ಟಂನೇನಿ ನಿರ್ದೇಶಿಸಿದ್ದಾರೆ. ಸಿನಿಮಾದ ಸಾಹಸ ದೃಶ್ಯಗಳು ನಿರೀಕ್ಷೆಗೆ ಮೀರಿದ ಯಶಸ್ಸನ್ನು ತಂದುಕೊಟ್ಟಿವೆ. ಸಿನಿಮಾಟೊಗ್ರಾಫರ್ ಆಗಿ ಚಿತ್ರರಂಗಕ್ಕೆ ಕಾಲಿಟ್ಟಿದ್ದ ಕಾರ್ತಿಕ್ ಗುಟ್ಟಂನೇನಿ 2015ರಲ್ಲಿ 'ಸೂರ್ಯ ವರ್ಸಸ್ ಸೂರ್ಯ' ಎಂಬ ಸಿನಿಮಾದಿಂದ ನಿರ್ದೇಶಕರಾದರು. ದೀರ್ಘಾವಧಿಯ ನಂತರ ಅವರು ನಿರ್ದೇಶಿಸಿದ ಸಿನಿಮಾ 'ಈಗಲ್'. ತಾವೇ ಸಂಕಲನಕಾರರೂ ಆಗಿರುವ ಈ ನಿರ್ದೇಶಕರನ್ನು ಹೊಸ ತಲೆಮಾರಿನ ಪ್ರೇಕ್ಷಕರ ನಾಡಿಮಿಡಿತ ಅರಿತವರು ಎಂದೇ ಈಗ ಬಣ್ಣಿಸಲಾಗುತ್ತಿದೆ. 'ಈಗಲ್' ಸಿನಿಮಾದಲ್ಲಿ ಲಯವಿಲ್ಲ ಎಂದು ಟೀಕೆ–ಟಿಪ್ಪಣಿಗಳು ವ್ಯಕ್ತವಾಗಿದ್ದವು. ಆದರೆ, ಬಹುತೇಕ ವಿಮರ್ಶಕರು ರವಿ ತೇಜಾ ಅವರ ಅಭಿನಯ ಹಾಗೂ ಸಾಹಸ ದೃಶ್ಯಗಳ ಸಂಯೋಜನೆಯನ್ನು ಕೊಂಡಾಡಿದ್ದರು. ಅದೇ ಈಗ ಬಾಕ್ಸಾಫೀಸ್‌ನಲ್ಲಿ ಸತ್ಫಲ ಕೊಡುತ್ತಿದೆ. ■

